**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ದೇವದುರ್ಗ.**

**ಸಿ.ಸಿ. ನಂ.416/2025**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಗಬ್ಬೂರು ಪೊಲೀಸ ಠಾಣೆ.

**ವಿರುದ್ಧ** –

ಆರೋಪಿತರಾದ

1. ಮೌಲಾಲಿ ತಂದೆ ಸಣ್ಣ ಗೋಕುಲಸಾಬ,
ವಯಸ್ಸು: 19 ವರ್ಷಗಳು, ಉಃ ವಿದ್ಯಾರ್ಥಿ,

2. ಶಕೀಲಾ ಬೇಗಂ ಗಂಡ ಸಣ್ಣ ಗೋಕುಲ ಸಾಬ್,
ವಯಸ್ಸು: 37 ವರ್ಷಗಳು, ಉಃ ಹೊಲ ಮನೆ ಕೆಲಸ,

3. ರಫೀ ತಂದೆ ದೊಡ್ಡಗೋಕುಲ ಸಾಬ,
ವಯಸ್ಸು: 30 ವರ್ಷಗಳು, ಉಃ ಒಕ್ಕಲುತನ,

4. ಫೀರ್ ಸಾಬ ತಂದೆ ಹುಚ್ಚಪ್ಪ, ವಯಸ್ಸು: 36 ವರ್ಷಗಳು,
ಉಃ ಒಕ್ಕಲುತನ, ಎಲ್ಲರೂ ಸಾಃ ತಿಪ್ಪಲದಿನ್ನಿ.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮಗಳ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ–

ದಿನಾಂಕ 15.03.2025 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಗಬ್ಬೂರು ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ತಿಪ್ಪಲದಿನ್ನಿ ಗ್ರಾಮದ ಸಿಮಾದಲ್ಲಿ ಬರುವ ಸರ್ವೆ ನಂ.41/* ನೇದ್ದರಲ್ಲಿ 2 ಎಕರೆ 03 ಗುಂಟೆ ಜಮೀನಿನಲ್ಲಿ ಸಾಕ್ಷಿ–1 ರವರ ಗಂಡನಿಗೆ ಬರಬೇಕಾದ 12 ಗುಂಟೆ ಜಮೀನು ಬಂದಿರುತ್ತದೆ. ಆರೋಪಿತರು ಜಮೀನಿನಲ್ಲಿ ಮಡಿಕೆಯನ್ನು ಹೊಡೆದಿದ್ದರಿಂದ ಸಾಕ್ಷಿ–1 ರವರು ಆರೋಪಿತರ ಮನೆಗೆ ವಿಚಾರಿಸಲು

ಹೋದಾಗ 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಈ ಮುದಿ ಸೂಳೆದು ಬಹಳ ಆಗಿದೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.352 ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕೈಯಿಂದ ಹೊಡೆದಿದ್ದು, 2 ರಿಂದ 4 ನೇ ಆರೋಪಿತರಾದ ನೀವುಗಳು ಸಾಕ್ಷಿ-1 ರವರಿಗೆ ಕೈಯಿಂದ ಹೊಡೆಬಡೆ ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.115(2) ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ನೇ ಆರೋಪಿತರಾದ ನೀವು ಸಾಕ್ಷಿ-1 ರವರ ಸೀರೆ ಸೆರಗನ್ನು ಹಿಡಿದು ಎಳೆದಾಡಿ ಅವಮಾನ ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.74 ಸಹವಾಚಕ ಕಲಂ.3(5) ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 4 ನೇ ಆರೋಪಿತರಾದ ನೀವುಗಳು ನಿಮ್ಮನ್ನು ಸಾಯಿಸಿ ಬಿಡುವುದಾಗಿ ಜೀವದ ಬೇದರಿಕೆ ಹಾಕಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.351(2) ಸಹ ಕಲಂ.3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 26.05.2026 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ,**
**ದೇವದುರ್ಗ.**
**ಸಿ.ಸಿ. ನಂ.416/2025**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಗಬ್ಬೂರು ಪೊಲೀಸ ಠಾಣೆ.

**ವಿರುದ್ಧ** –

ಆರೋಪಿತರಾದ

1. ಮೌಲಾಲಿ ತಂದೆ ಸಣ್ಣ ಗೋಕುಲಸಾಬ,
2. ಶಕೀಲಾ ಬೇಗಂ ಗಂಡ ಸಣ್ಣ ಗೋಕುಲ ಸಾಬ್,
3. ರಫೀ ತಂದೆ ದೊಡ್ಡಗೋಕುಲ ಸಾಬ,
4. ಫೀರ್ ಸಾಬ ತಂದೆ ಹುಚ್ಚಪ್ಪ,

:: **ಆಪಾದನೆ** ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ–

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ–

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.